ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 20-23
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ಮಹಿಳೆಯರ ವಿದ್ಯಾಭ್ಯಾಸ

**ಡಾ. ಪಾರ್ವತಮ್ಮ ಎಂ**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಶ್ರೀ ಶಿವಲಿಂಗೇಶ್ವರ ಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚೆನ್ನಗಿರಿ, ದಾವಣಗೆರೆ ಜಿಲ್ಲೆ

***Abstract:***
*ಮಲೆನಾಡಿನ ಹೆಬ್ಬಾಗಿಲು ರಾಜಧಾನಿ ಎಂದು ಪ್ರಸಿದ್ಧಿಯಾಗಿರುವ ಶಿವಮೊಗ್ಗ ಜಿಲ್ಲೆಯು ಪ್ರಾಕೃತಿಕ ಸಾಂಸ್ಕೃತಿಕ, ಚಾರಿತ್ರಿಕ, ಧಾರ್ಮಿಕ, ಆರ್ಥಿಕ ನೆಲೆಗಳ ಸಂಗಮ ಕ್ಷೇತ್ರ. ಶಿವಮೊಗ್ಗ ಜಿಲ್ಲೆಯು ಈ ಹಿಂದೆ ಒಂಬತ್ತು ತಾಲೂಕುಗಳನ್ನು ಹೊಂದಿತ್ತು. ಆಡಳಿತ ಸುಧಾರಣಾ ಕ್ರಮದಿಂದಾಗಿ ಹೊನ್ನಾಳಿ ಮತ್ತು ಚನ್ನಗಿರಿ ತಾಲೂಕುಗಳು ನೂತನ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾದವು. ಇಂದು ಶಿವಮೊಗ್ಗ, ಭದ್ರಾವತಿ, ತೀರ್ಥಹಳ್ಳಿ, ಹೊಸನಗರ, ಸೊರಬ, ಸಾಗರ, ಶಿಕಾರಿಪುರ ಎಂಬ ಏಳು ತಾಲೂಕುಗಳನ್ನು ಹೊಂದಿರುವ ಜಿಲ್ಲೆಯಾಗಿದೆ. ಪ್ರಾಚೀನ ಕಾಲದಿಂದಲೂ ಈ ಜಿಲ್ಲೆಯನ್ನು ಅನೇಕ ರಾಜಮನೆತನಗಳು ಆಳ್ವಿಕೆ ಮಾಡಿ ಇತಿಹಾಸಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿವೆ. ಇಂತಹ ರಾಜ ಮನೆತನಗಳು ತಮ್ಮ ಆಳ್ವಿಕೆಯ ಸಮಯದಲ್ಲಿ ಹಾಕಿಸಿದಂತಹ ಶಾಸನಗಳು ಶೇ.90 ರಷ್ಟು ಭಾಗ ಸತ್ಯಕ್ಕೆ ಹತ್ತಿರವಾದ ಸಮಕಾಲೀನ ಘಟನೆಗಳನ್ನು ತಿಳಿಸುತ್ತವೆ. ಪ್ರಸ್ತುತ ಲೇಖನದಲ್ಲಿ ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ಮಹಿಳೆಯರ ವಿದ್ಯಾಭ್ಯಾಸ ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ಕರ್ನಾಟಕ ಇತಿಹಾಸ, ಶಿವಮೊಗ್ಗ ಜಿಲ್ಲೆ, ಶಾಸನಗಳ ಅಧ್ಯಯನ, ಮಹಿಳೆಯರ ವಿದ್ಯಾಭ್ಯಾಸ.*

## ಪೀಠಿಕೆ

ಶಿವಮೊಗ್ಗ ಜಿಲ್ಲೆಯಲ್ಲಿ ಈವರೆಗೂ ದೊರೆತಿರುವ ಶಾಸನ ಸಂಪತ್ತಿನಲ್ಲಿ ಅರ್ಧಭಾಗಕ್ಕಿಂತ ಹೆಚ್ಚಿನ ಪಾಲು ದಾನ-ದತ್ತಿ ಶಾಸನಗಳಿಗೆ ಸಲ್ಲುತ್ತದೆ. ಉಳಿದ ಪಾಲಿನಲ್ಲಿ ಉದಾತ್ತ ಉದ್ದೇಶಗಳಿಗಾಗಿ ಹೋರಾಡಿ ಮಡಿದ ವೀರರಿಗಾಗಿ ವೀರ ನಾರಿಯರಿಗಾಗಿ ಬರೆಸಿದ ವೀರಗಲ್ಲುಗಳ ಮಡಿದ ಪತಿಗಾಗಿ ಆತ್ಮಾರ್ಪಣೆ ಮಾಡಿಕೊಂಡ, ಮಹಾಸತಿಯರಿಗಾಗಿ ಬರೆಸಿದ ಮಾಸ್ತಿಕಲ್ಲುಗಳು ಮೋಕ್ಷ ಪ್ರಾಪ್ತಿಗಾಗಿ ಜಿನಾ ದೀಕ್ಷೆ ಪಡೆದು ಸ್ವರ್ಗ ಪಡೆದವರಿಗಾಗಿ ಬರೆಸಿದ ನಿಷದಿ ಕಲ್ಲುಗಳು. ಮತ್ತೊಬ್ಬರ ಯಶಸ್ವಿಗಾಗಿ, ಶ್ರೇಯಸ್ಸಿಗಾಗಿ, ಆತ್ಮ ಬಲಿದಾನವಾದವರಿಗಾಗಿ ಬರೆಸಿದ ಆತ್ಮ ಬಲಿದಾನ ಸ್ಮಾರಕ ಕಲ್ಲುಗಳು. ಒಂದೇ ಸಾಲಿನ ಬಿಡಿ ಬರಹಗಳು ಇತರೆ ಬರಹಗಳು ಸೇರುತ್ತವೆ. ಶಿವಮೊಗ್ಗ ಜಿಲ್ಲಾ ಪ್ರದೇಶದಲ್ಲಿ ಸಂಪುಟಗಳ ಉಲ್ಲೇಖದಂತೆ 1929 ಶಾಸನಗಳಿವೆ. ಇವುಗಳಲ್ಲಿ ಸುಮಾರು 200 ಶಾಸನಗಳಲ್ಲಿ ಮಹಿಳೆಯರ ಅಂದರೆ ಸಾಮಾನ್ಯ ವರ್ಗದ ಮಹಿಳೆಯರಿಂದ ಹಿಡಿದು ಪ್ರಭುವರ್ಗದ ಮಹಿಳೆಯರವರೆಗೆ ಆಡಳಿತಾತ್ಮಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಕಲೆ ಮುಂತಾದ ಸಾಧನೆಗಳನ್ನು ತಿಳಿಸುತ್ತವೆ. ಶಿವಮೊಗ್ಗ ಜಿಲ್ಲೆಯ ಶಾಸನಗಳನ್ನು ಕುರಿತು ಮೊದಲು ಸಂಗ್ರಹ ಮತ್ತು ಅಧ್ಯಯನ ಮಾಡಿದವರು ಬಿ.ಎಲ್.ರೈಸ್ ರವರಾಗಿದ್ದಾರೆ. ನಂತರ

***Please cite this article as:*** ಪಾರ್ವತಮ್ಮ, ಎಂ. (2026). ಶಿವಮೊಗ್ಗ ಜಿಲ್ಲೆಯ ಶಾಸನಗಳಲ್ಲಿ ಮಹಿಳೆಯರ ವಿದ್ಯಾಭ್ಯಾಸ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 4(6), 20–23

ಅನೇಕ ವಿದ್ವಾಂಸರು ಈ ಜಿಲ್ಲೆಯನ್ನು ಕುರಿತು ಅಧ್ಯಯನ ಮಾಡಿ ಅನೇಕ ಗ್ರಂಥಗಳನ್ನು ಪ್ರಬಂಧಗಳನ್ನು ಹೊರತಂದಿದ್ದಾರೆ. ನಾನು ನನ್ನ ಲೇಖನದಲ್ಲಿ ಮಹಿಳೆಯರ ವಿದ್ಯಾಭ್ಯಾಸ ಕುರಿತು ಶಾಸನಗಳ ಉಲ್ಲೇಖದಂತೆ ಮಾಹಿತಿ ಸಂಗ್ರಹ ಮಾಡುವ ಪ್ರಯತ್ನ ಮಾಡಿದ್ದೇನೆ .

ಪ್ರಾಚೀನ ಕಾಲದಿಂದಲೂ ಅನೇಕ ವಿದ್ವಾಂಸರು ಮಹಿಳೆ ವಿದ್ಯಾಭ್ಯಾಸದಿಂದ ವಂಚಿತಳಾಗಿದ್ದಾಳೆ ಎಂಬುದಾಗಿ ತಿಳಿಸಿರುತ್ತಾರೆ. ಆದರೆ ಈ ಪ್ರದೇಶದಲ್ಲಿ ದೊರೆತಿರುವ ಶಾಸನಗಳಲ್ಲಿ ಮಹಿಳೆ ಶಿಕ್ಷಣದಿಂದ ವಂಚಿತಳಾಗಿರುವ ಕುರಿತು ಉಲ್ಲೇಖಗಳು ಇಲ್ಲ ಹಾಗೂ ಸ್ತ್ರೀಯರು ವಿದ್ಯಾಭ್ಯಾಸ ಪಡೆದಿರುವ ಗುರುಕುಲಗಳ ಹೆಸರುಗಳಾಗಲಿ ಅಥವಾ ಗುರುಗಳ ಹೆಸರುಗಳಾಗಲಿ ಸಿಗುವುದಿಲ್ಲ. ಆದರೆ ಶಾಸನಗಳಲ್ಲಿ ಮಹಿಳೆಯರನ್ನು ಕುರಿತು ಹೇಳುವಾಗ ಅವರಿಗಿದ್ದ ಬಿರುದುಗಳು ಉಲ್ಲೇಖವಾಗಿವೆ .

"ಭೂ–ಭೂವನ ವಿದ್ಯಾಧರೆ" "ವಿದ್ಯಾದರೆ ಶಾರದಾದೇವಿ" "ಶಾರದಾದೇವಿ ಲಬ್ಧವರ ಪ್ರಸಾದೆ" ಶಾರದೇವಿಗೆ ಸಮನಪ್ಪ ಮಗಳು ವಿದ್ಯೆಯಲ್ಲಿ ಸರಸ್ವತಿಗೆ ಮಿಗಿಲು ಎಂಬ ಉಲ್ಲೇಖಗಳು ಮಹಿಳೆಯರು ಪಡೆದ ವಿದ್ಯಾಭ್ಯಾಸ ಪಾಂಡಿತ್ಯವನ್ನು ತಿಳಿಸುತ್ತವೆ.

ಕ್ರಿ.ಶ.1070ರ ಬಳ್ಳಿಗಾವಿಯ ಶಾಸನದಲ್ಲಿ ಲಚ್ಚಲ ದೇವಿಯನ್ನು ಭುವನ ವಿದ್ಯಾದರೆ ಎಂದು ಹೊಗಳಿದೆ ಭೂಮಿಯ ಮೇಲಿನ ವಿದ್ಯೆಯನ್ನು ಪಡೆದವರಲ್ಲಿ ಪ್ರಖ್ಯಾತಿಯನ್ನು ಪಡೆದವಳು ಅಥವಾ ಪ್ರಖ್ಯಾತಿಯನ್ನು ಪಡೆದ ವಿದ್ಯಾವಂತೆ ಆಗಿದ್ದಳು ಹಾಗೂ ಶಾರದಾದೇವಿ ಲಬ್ಧ ವರಪ್ರಸಾದ ಶಾರದಾ ದೇವಿಯ ವರದಿಂದ ಜನಿಸಿದವಳು ಎಂದು ತಿಳಿಯಬಹುದಾಗಿದೆ.

ಕ್ರಿ.ಶ.1072ರ ಶಾಸನದಲ್ಲಿ ಬಾಚಿಕಬ್ಬೆಯನ್ನು ಶಾರದಾ ದೇವಿಗೆ ಸಮನಾದ ಮಗಳು ಎಂದು ತಿಳಿಸುತ್ತದೆ. ಆದರೆ ವಿದ್ಯೆಯನ್ನು ಪಡೆದಿರುವಲ್ಲಿ ಬಾಚಿಕಬ್ಬೆ ಶಾರದಾದೇವಿಗೆ ಸಮನಾದವಳು ಎಂದು ತಿಳಿಯಬಹುದು.

ಕ್ರಿ.ಶ.1096ರ ಆವಿನಹಳ್ಳಿ ಶಾಸನದಲ್ಲಿ ಸಾಂತಳಿಗೆ ನಾಡ ಸಾಂತರದೇವನ ಪಡೆವಳ ಎರೆಯಮ್ಮನ ಪತ್ನಿ ಪಡೆವಳಿಕೆ ಜಕ್ಕಣಬ್ಬೆಯನ್ನು ಗುಣದಲ್ಲಿ ಅರುಂಧತಿಗೆ ವಿದ್ಯೆಯಲ್ಲಿ ಸರಸ್ವತಿಗೆ ಮಿಗಿಲು ಎಂದು ಬಣ್ಣಿಸಿದೆ. ಅಂದರೆ ಸರಸ್ವತಿಗಿಂತ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆದಿದ್ದಳು ಎಂಬುದು ಅವಳು ವಿದ್ಯಾಭ್ಯಾಸದಲ್ಲಿ ಪಡೆದ ಪಾಂಡಿತ್ಯವನ್ನು ತಿಳಿಸುತ್ತದೆ. ಕ್ರಿ.ಶ.1134ರ ಉದ್ರಿ ಶಾಸನದಲ್ಲಿ ಸುಗ್ಗಿಯಬ್ಬೆಯನ್ನು ಭಾರತೀ ಕಣ ಪೊರೆ ಎಂದು ಹೇಳಲಾಗಿದೆ. ವಿದ್ಯೆಯನ್ನು ಕಿವಿಗೆ ಹಾಕುವ ಓಲೆಯಂತೆ ಎಂದು ಹೊಗಳಿರುವುದು ಆಕೆಯ ಪಾಂಡಿತ್ಯವನ್ನು ವ್ಯಕ್ತಪಡಿಸುತ್ತದೆ .

ಕ್ರಿ.ಶ.1189ರ ಕುಪ್ಪಗಡ್ಡೆಯ ಶಾಸನದಲ್ಲಿ ಕಾಳಲಾದೇವಿಯನ್ನು ಮಹಾವಿವೇಕವಳ್ಳಿನ ಶುಭಗೆ ಎಂದು ಉಲ್ಲೇಖಿಸಿದೆ. ಅಂದರೆ ಕಾಳಲಾದೇವಿ ವಿದ್ಯಾವಂತೆ ವಿವೇಕ ಉಳ್ಳವಳು ಎಂದು ತಿಳಿಯಬಹುದು. ಕ್ರಿಸ್ತಶಕ 1207ರ ಬಂದಳಿಕೆಯ ಶಾಸನವು ಅಭಿನವ ಕೇತಲಾದೇವಿಯನ್ನು ರೂಪಲಾವಣ್ಯ, ವಾಕ್ ವಿಭವ ವೋದಿದೆ ಎಂದು ಹೊಗಳಿದೆ ಮತ್ತು ಸಹಜಸಿದ್ಧ ಸರಸ್ವತಿ ಎಂದು ಹೇಳಿದೆ. ಅಂದರೆ ವಿದ್ಯೆಯನ್ನು ಸರಸ್ವತಿಯಂತೆ ಸಹಜವಾಗಿ ಪಡೆದುಕೊಂಡಿದ್ದಳು ಎಂಬುದು ಅಭಿನವ ಕೇತಳದೇವಿಯನ್ನು ವಿದ್ಯಾವಂತೆ ಎಂದು ತಿಳಿಸಿದೆ .

ಕ್ರಿ.ಶ.1112ರ ಆಲಳ್ಳಿ ಶಾಸನದಲ್ಲಿ ಬಾಚಲಾದೇವಿಯನ್ನು ಚತುರ್ ಬಿದ್ದೆ ವಿನೋದೆ ಎಂದು ಹೇಳಲಾಗಿದೆ. ಅಂದರೆ ಗ್ರಂಥ ಅಭ್ಯಾಸ, ಸಂಗೀತ, ನೃತ್ಯ, ಗಾಯನದಲ್ಲಿ ಪಾಂಡಿತ್ಯವನ್ನು ಹೊಂದಿದ್ದಳು ಎಂದು ತಿಳಿಯಬಹುದು.

ಕೆಳದಿ ಅರಸರ ಕಾಲದಲ್ಲಿ ಸೋಮಶೇಖರ ನಾಯಕರಿಗೆ ವಿದ್ಯಾವಂತೆ ಬುದ್ಧಿವಂತೆ ಹಾಗೂ ರೂಪವತಿಯಾದ ವಧುವನ್ನು ಹುಡುಕಿ ವಿವಾಹ

ಮಾಡಿಕೊಡಲಾಗಿತ್ತು ಎಂಬ ಉಲ್ಲೇಖವಿದೆ. ಆದುದರಿಂದ ಕೆಳದಿಯ ರಾಣಿ ಚೆನ್ನಮ್ಮಾಜಿಯು ವಿದ್ಯಾವಂತೆಯಾಗಿದ್ದಳು ಎಂದು ತಿಳಿಯಬಹುದು.

ಈ ಶಾಸನಗಳಲ್ಲಿ ಉಲ್ಲೇಖವಾಗಿರುವ ಬಿರುದುಗಳಿಂದ ಮಹಿಳೆಯರು ವಿದ್ಯಾವಂತೆಯರು ಆಗಿದ್ದರು ಎಂದು ತಿಳಿದುಕೊಳ್ಳಲು ಸಾಧ್ಯವಿದೆ ಮತ್ತು ವಿದ್ಯಾಭ್ಯಾಸ ಪಡೆದ ಪಂಡಿತರಾಗಿದ್ದು ಮಹಿಳೆಯರಿಗೆ ಈ ರೀತಿ ಬಿರುದುಗಳಿದ್ದವು ಎಂದು ತಿಳಿಯಬಹುದು. ಈ ರೀತಿ ಗ್ರಂಥ ಅಭ್ಯಾಸದ ಮೂಲಕ ವಿದ್ಯಾಭ್ಯಾಸ ಪಡೆದುಕೊಂಡಂತಹ ಮಹಿಳೆಯರು ಸಾಹಿತ್ಯ ಗ್ರಂಥ ರಚನೆಯನ್ನು ಮಾಡಿರುವ ಉಲ್ಲೇಖಗಳು ಶಿವಮೊಗ್ಗ ಪ್ರದೇಶದ ಶಾಸನಗಳಲ್ಲಿ ಕಾಣಬಹುದು.

ಕ್ರಿ.ಶ.1112ರ ಜುಂಬಾಣೆಯ ಶಾಸನದಲ್ಲಿ ಕವಿಯತ್ರಿ ಅಕ್ಕಯ್ಯ ಹಾನುಗಲ್ಲು ಕದಂಬ ಕೀರ್ತಿ ದೇವನು ಸಾಂತಳಿಗೆ ನಾಡ ಮೇಲೆ ದಾಳಿ ಮಾಡಿ ಬರಿ ಊರ ತೋಟ ಕಡಿದು ಮಾಳಿಗೆ ಸುಡುವಾಗ ವೀರಗೊಗ್ಗಿಗನು ವೈರಿಗಳನ್ನು ಎದುರಿಸಿ ಹೋರಾಡಿ ಮಡಿದ ಜಕ್ಕಗೌಡ ಜಕ್ಕಿಯಬ್ಬೆಯ ಗೋವಿತಿಯ ಸೊಸೆ ಅರ್ಜುನ ಗೌಡ ಪತ್ನಿ ವೀರಗೋಗ್ಗಿಗಳ ಅಕ್ಕಯಬ್ಬೆ ಗೋವಿತಿ ಮಡಿದ ತನ್ನ ತಮ್ಮ ವೀರಗೊಗ್ಗಿನ ದುಃಖವನ್ನು ಹೊರಹಾಕಲು ಮನೆ ಕೀರ್ತಿ ಹೆಚ್ಚಿಸಲು ಕಾವ್ಯರೂಪದಲ್ಲಿ ಹೇಳಿ ವೀರ ಶಾಸನ ಬರೆಸಿದಳು ಎಂಬ ಉಲ್ಲೇಖವಿದೆ ಅಂದರೆ ಈಕೆಗೆ ಕಾವ್ಯವನ್ನು ರಚಿಸುವಂತಹ ಸಾಮರ್ಥ್ಯವಿತ್ತು ಎಂಬುದಾಗಿ ತಿಳಿಯುತ್ತದೆ .

ಕ್ರಿ.ಶ.1212ರ ಚಿಕ್ಕಮಾಗಡಿ ಶಾಸನದಲ್ಲಿ ನಾಗರ ಕಂಡ ದ ಕವಿಯತ್ರಿ ಜಕ್ಕಲಾಂಬೆಯ ಉಲ್ಲೇಖವಿದೆ. ಹೊಯ್ಸಳರ ರಾಜ ವೀರ ಬಲ್ಲಾಳನ ಕಾಲದಲ್ಲಿ ಮಾಗಡಿಯ ಶಾಂತಿನಾಥ ಬಸದಿ ಕಟ್ಟಿಸಿದ ಶಂಕರ ಚಕ್ಕೋವೆಯರ ಮೊಮ್ಮಗಳು ಸಾಮಂತ ಮುದ್ದಯ್ಯ ಲಚ್ಚಲಾಂಬಿಕೆಯ ಮಗಳಾದ ಜಕ್ಕಲಾಂಬೆಯು ಗುಣಮುಖಮಾಲೆ ಎಂಬ ಕೃತಿಯನ್ನು ರಚಿಸಿದಳು. ಜೀವನದಲ್ಲಿ ವಿರಕ್ತಿ ಹೊಂದಿದಳು ಎಂಬ ಉಲ್ಲೇಖವಿದೆ.

ಕೆಳದಿಯ ಕಿರಿಯ ಬಸಪ್ಪ ನಾಯಕನ ಆಸ್ಥಾನದಲ್ಲಿ ಗಂಗಾದೇವಿ ಎಂಬುವವಳು ಕೆಳದಿ ಎಂಬ ಗ್ರಂಥವನ್ನು ರಚಿಸಿರುವ ಉಲ್ಲೇಖವಿದೆ.

ಶಿವಮೊಗ್ಗ ಜಿಲ್ಲೆಯ ಮಹಿಳೆಯರ ವಿದ್ಯಾಭ್ಯಾಸವನ್ನು ನೋಡಿದಾಗ ಮಹಿಳೆ ವಿದ್ಯಾಭ್ಯಾಸದಿಂದ ವಂಚಿತಳಾಗಿರುವ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ ಈ ಪ್ರದೇಶದ ಶಾಸನಗಳಲ್ಲಿ ಮಹಿಳೆಯರಿಗೆ ಇರುವ ಬಿರುದುಗಳು ಅವಳ ವಿದ್ಯಾಭ್ಯಾಸ ಪಡೆದುಕೊಂಡಿದ್ದಳು ಎಂದು ತಿಳಿಯಲು ಅವಕಾಶವಿದೆ ಹಾಗೂ ವಿದ್ಯೆಯನ್ನು ಪಡೆದುಕೊಂಡ ಮಹಿಳೆಯರಿಗೆ ಮಾತ್ರ ಈ ರೀತಿಯ ಬಿರುದುಗಳಿರುತ್ತವೆ ಎಂದು ತಿಳಿಯಬಹುದು ಹಾಗೂ ಶಾಸನಗಳಲ್ಲಿ ಅಂತ್ಯವಾಸಿನಿ ಎಂಬ ಉಲ್ಲೇಖಗಳು ಸಿಗುತ್ತವೆ ಅಂದರೆ ಗಂಡು ಮಕ್ಕಳಂತೆ ಹೆಣ್ಣು ಮಕ್ಕಳು ಕೂಡ ಗುರುಗಳನ್ನು ಹುಡುಕಿಕೊಂಡು ಹೋಗಿ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದರು ಎಂದು ತಿಳಿಯಬಹುದು. ಅಂದರೆ ಪ್ರಾಚೀನ ಕಾಲದಿಂದಲೂ ಆಸಕ್ತಿ ಇರುವ ಮಹಿಳೆಯರು ವಿದ್ಯಾಭ್ಯಾಸವನ್ನು ಪಡೆದುಕೊಂಡಿದ್ದರು ಎಂದು ತಿಳಿಯಲು ನಮಗೆ ಶಿವಮೊಗ್ಗ ಜಿಲ್ಲೆಯ ಶಾಸನಗಳು ಮಾಹಿತಿಯನ್ನು ಕೊಡುತ್ತವೆ.

**ಪರಾಮರ್ಶನ ಗ್ರಂಥಗಳು**


- ಎ.ಕ. 7 .ಶಿಕಾರಿಪುರ 109 ಬಳ್ಳಿಗಾವಿ ಕ್ರಿ.ಶ 1070
- ಎ.ಕ. 7 ಶಿಕಾರಿಪುರ 172 ಕ್ರಿ.ಶ 1072
- ಎ.ಕ. 15 .ಸಾಗರ 13 ಅವಿನಹಳ್ಳಿ ಕ್ರಿ.ಶ 1096
- ಎ.ಕ. 8. ಸೊರಬ 233 ಉದ್ರಿ ಕ್ರಿಸಾ 11 34
- ಎ.ಕ. 7. ಶಿಕಾರಿಪುರ. 235. ಬಂದಣಿಕೆ ಕ್ರಿ.ಶ 1127
- ಎ.ಕ. 13 .ಶಿವಮೊಗ್ಗ ಏಳು ಹಾಲಹಳ್ಳಿ ಕ್ರಿಶ 1312

- ಚನ್ನಕ್ಕ ಎಲೆಗಾರ. (1987). *ಪ್ರಾಚೀನ ಕರ್ನಾಟಕದ ರಾಣಿಯರು.* ಶ್ರೀ ಎಸ್ ಎಸ್ ಕುಲಕರ್ಣಿ ಗೌರೀಶ ಮುದ್ರಣಾಲಯ.
- ಚಿದಾನಂದಮೂರ್ತಿ. (2002). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಸಪ್ನ ಬುಕ್ ಹೌಸ್
- ಕೃಷ್ಣರಾವ್, ಎಂ.ವಿ. (1970). *ಕರ್ನಾಟಕದ ಇತಿಹಾಸ ದರ್ಶನ.* ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ
- ಸೀತಾರಾಮ್ ಜಗಿರ್ದಾರ್. (2008). *ಶಿವಮೊಗ್ಗ ಜಿಲ್ಲೆಯ ಶಾಸನಗಳು ಶಿವಮೊಗ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ.* ಪುಟ. 52